# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ**

ಕವಿಪ್ರನಿನಿ/ಬಿ93/35989/2018-19/ C45-17

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು- 560 009
ದಿನಾಂಕ: 18 JAN 2019

## ಸುತ್ತೋಲೆ

ವಿಷಯ: ಕವಿಪ್ರನಿನಿ/ವಿಸಕಂಗಳಲ್ಲಿ ನೂತನವಾಗಿ ನೇಮಕವಾಗಿರುವ ಕಿರಿಯ ಸ್ಟೇಷನ್ ಪರಿಚಾರಕರು ಮತ್ತು ಕಿರಿಯ ಪವರ್‌ಮ್ಯಾನ್ ನೌಕರರಿಗೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಸಲ್ಲಿಸಬೇಕಾದ ಅನುಬಂಧ-1ರಲ್ಲಿ ಸೇವೆಗೆ ಸೇರಿದ ದಿನಾಂಕವನ್ನು ಪರಿಗಣಿಸುವ ಬಗ್ಗೆ.

ಉಲ್ಲೇಖ: 1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3281/2014-15 ದಿನಾಂಕ: 27.03.2015
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ93/35989/2016-17/ಸಿವೈಎಸ್-12 ದಿನಾಂಕ: 14.12.2016
3. ನಿಗಮದ ಟಿಪ್ಪಣಿ ಸಂಖ್ಯೆ:ಬಿ16/86457/2018-19 ದಿನಾಂಕ:10.01.2019

**********

ಉಲ್ಲೇಖ (1)ರ ನಿಗಮದ ಆದೇಶದಲ್ಲಿ ಕವಿಪ್ರನಿನಿ/ವಿಸಕಂಗಳಲ್ಲಿ ನೂತನವಾಗಿ ನೇಮಕವಾಗಿರುವ ಕಿರಿಯ ಸ್ಟೇಷನ್ ಪರಿಚಾರಕರು ಮತ್ತು ಕಿರಿಯ ಪವರ್‌ಮ್ಯಾನ್ ರವರುಗಳನ್ನು ಮಾಸಿಕ ಕ್ರೋಢೀಕೃತ ಸಂಭಾವನೆ ಆಧಾರದ ಮೇಲೆ 3 ವರ್ಷದ ತರಬೇತಿ ಅವಧಿಗೆ ನೇಮಕ ಮಾಡಿಕೊಳ್ಳಲಾಗಿರುತ್ತದೆ ಮತ್ತು (3)ವರ್ಷದ ತರಬೇತಿ ಅವಧಿ ತೃಪ್ತಿಕರವಾಗಿ ಪೂರ್ಣಗೊಳಿಸುವ ನೌಕರರಿಗೆ ಕಿರಿಯ ಸ್ಟೇಷನ್ ಪರಿಚಾರಕರು ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಯ ವೇತನ ಶ್ರೇಣಿಯನ್ನು ನಿಗದಿ ಪಡಿಸಬಹುದಾಗಿದೆ ಎಂದು ತಿಳಿಸಲಾಗಿದೆ ಮತ್ತು ಉಲ್ಲೇಖ (1)ರನ್ವಯ ನೇಮಕಗೊಂಡ ಕಿರಿಯ ಸ್ಟೇಷನ್ ಪರಿಚಾರಕರು ಮತ್ತು ಕಿರಿಯ ಪವರ್‌ಮ್ಯಾನ್‌ಗಳು ಮೂರು ವರ್ಷದ ತೃಪ್ತಿಕರ ತರಬೇತಿಯನ್ನು ಪೂರೈಸಿ, ಕಾಲಿಕ ವೇತನ ಶ್ರೇಣಿಯಲ್ಲಿ ಪರೀಕ್ಷಾರ್ಥ ಅವಧಿ ಪ್ರಾರಂಭವಾದ ದಿನಾಂಕದಿಂದ ಮುಂದಿನ ಅವಧಿಗೆ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ವಿಶ್ರಾಂತಿ ಯೋಜನೆ ವ್ಯಾಪ್ತಿಗೆ ಒಳಪಡುತ್ತಾರೆ.

ಮುಂದುವರೆದು, ಉಲ್ಲೇಖ (3)ರ ನಿಗಮದ ಟಿಪ್ಪಣಿಯಲ್ಲಿ "***ಕಿರಿಯ ಸ್ಟೇಷನ್ ಪರಿಚಾರಕರು ಮತ್ತು ಕಿರಿಯ ಪವರ್‌ಮ್ಯಾನ್ ರವರುಗಳಿಗೆ ಎನ್.ಡಿ.ಸಿ.ಪಿ.ಎಸ್ ವತಿಯಿಂದ ನೀಡಲಾಗುವ ಎಲ್ಲಾ ಸೇವಾ ಸೌಲಭ್ಯಗಳಿಗೆ, ಕಾಲಿಕ ವೇತನ ಶ್ರೇಣಿಯ ಆಧಾರದ ಮೇಲೆ ಪರೀಕ್ಷಾರ್ಥ ಅವಧಿ ಪ್ರಾರಂಭವಾದ ದಿನಾಂಕದಿಂದ ಪರಿಗಣಿಸುವಂತೆ ಸ್ಪಷ್ಟೀಕರಿಸಲಾಗಿದೆ.***" ಆದ್ದರಿಂದ ಉಲ್ಲೇಖ (2)ರ ನಿಗಮದ ಪತ್ರದಲ್ಲಿ ಸೂಚಿಸಿರುವಂತೆ ಅನುಬಂಧ-1ರ ಕ್ರಮ ಸಂಖ್ಯೆ (4)ರಲ್ಲಿ "**ನೌಕರನ ಪರೀಕ್ಷಾರ್ಥ ಅವಧಿ ಪ್ರಾರಂಭವಾದ ದಿನಾಂಕ**"ವನ್ನು ನಮೂದಿಸಬೇಕಾಗಿ ತಿಳಿಸಲಾಗಿದೆ ಮತ್ತು ಖಾಯಂ ವಿಶ್ರಾಂತಿ ವೇತನ ಖಾತೆ ಸಂಖ್ಯೆ (PPAN) ಯನ್ನು ಹಂಚಿಕೆ ಮಾಡಲು ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕಕ್ಕೆ ಅನುಬಂಧ-1ರ ಜೊತೆಗೆ ನೌಕರನ ನೇಮಕಾತಿ ಆದೇಶದ ಪ್ರತಿ ಮತ್ತು (3)ವರ್ಷದ ತರಬೇತಿ ಅವಧಿಯನ್ನು ಪೂರ್ಣಗೊಳಿಸಿದ ನಂತರ ಕಾಲಿಕ ವೇತನ ಶ್ರೇಣಿಯನ್ನು ನಿಗದಿಪಡಿಸಿ ಹೊರಡಿಸಿರುವ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಬೇಕಾಗಿ ತಿಳಿಸಲಾಗಿದೆ. ಉಳಿದಂತೆ ಉಲ್ಲೇಖ (2)ರ ನಿಗಮದ ಆದೇಶದಲ್ಲಿನ ಇತರೆ ಯಾವುದೇ ವಿಷಯಗಳಲ್ಲಿ ಬದಲಾವಣೆ ಇರುವುದಿಲ್ಲ.

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ

ಪುಟ-2

ಪ್ರತಿಗಳು:

1. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
3. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ, ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com/e-prasarana ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.

1. ಎಲ್ಲಾ ಆರ್ಥಿಕ ಸಲಹೆಗಾರರು/ಮುಖ್ಯ ಆರ್ಥಿಕ ಅಧಿಕಾರಿಗಳು /ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ / ವಿಸಕಂಗಳು
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ) / ನಿಯಂತ್ರಣಾಧಿಕಾರಿ, ಕವಿಪ್ರನಿನಿ / ವಿಸಂಕಗಳು
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ) / ಉಪ-ಲೆಕ್ಕ ನಿಯಂತ್ರಣಾಧಿಕಾರಿ, ಕವಿಪ್ರನಿನಿ / ವಿಸಕಂಗಳು
4. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ / ವಿಸಕಂಗಳು
5. ಎಲ್ಲಾ ಲೆಕ್ಕಾಧಿಕಾರಿಗಳು(ಆಂತರಿಕ ಪರಿಶೋಧನೆ), ಕವಿಪ್ರನಿನಿ / ವಿಸಕಂಗಳು